ಬೆಂಗಳೂರಿನಲ್ಲಿರುವ ಲಾಲ್‌ಬಾಗ್ ಉದ್ಯಾನವನ

೧೩೧೫ ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಬಹಳ ಹಳೆಯ ಉದ್ಯಾನವನವಾದ ಚಿಕ್ಕಲಾಲ್‌ಬಾಗ್ ಬೆಂಗಳೂರು ನಗರದ ಮಧ್ಯ ಭಾಗದಲ್ಲಿ ಇರುವುದು ಸರ್ಕಾರಕ್ಕೆ ತಿಳಿದಿದೆಯೆ ?

ಆ) ಮೇಲ್ಕಂಡ ಉದ್ಯಾನವನವನ್ನು ಸರಿಯಾಗಿ ನಿರ್ವಹಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹೆಚ್ಚು ಹೆಚ್ಚು ಮರಗಿಡಗಳನ್ನು ನೆಟ್ಟು ಹಾಗೂ ಸರಿಯಾದ ದೀಪಗಳು ಇತ್ಯಾದಿಗಳನ್ನು ಹಾಕಿಸಿ ಮೇಲ್ಕಂಡ ಉದ್ಯಾನವನವನ್ನು ಅಭಿವೃದ್ಧಿಪಡಿಸಲು ಸರ್ಕಾರ ಕ್ರಮಗಳನ್ನು ಕೈಕೊಳ್ಳುವುದೇ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) —ಹೌದು—

ಆ) —ಇಲ್ಲ—

ಇ) ಇದನ್ನು ಇನ್ನೂ ಅಭಿವೃದ್ಧಿಪಡಿಸಲು ಯೋಚಿಸಲಾಗಿದೆ.

ಬೆಂಗಳೂರು ನಗರದ ಬನಶಂಕರಿ ಮತ್ತು ಜೆ. ಪಿ. ನಗರಗಳಲ್ಲಿ ಜನತಾ ಬಜಾರ್‌ಗಳನ್ನು ಪ್ರಾರಂಭಿಸುವುದು

೧೩೧೬ ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಸಹಕಾರ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಬೆಂಗಳೂರು ನಗರದಲ್ಲಿ ಹಾಲಿ ಯಾವ ಸ್ಥಳದಲ್ಲಿ ಜನತಾ ಬಜಾರುಗಳು ಕಾರ್ಯ ನಿರ್ವಹಿಸುತ್ತಿವೆ?

ಬಿ) ೧೯೯೦ರಲ್ಲಿ ಬೆಂಗಳೂರು ನಗರದ ಗಾಂಧಿಬಜಾರ್, ಬನಶಂಕರಿ–೨ನೇ ಹಂತ ಜೆ. ಪಿ. ನಗರ ಮತ್ತು ಇತರ ಪ್ರದೇಶಗಳಲ್ಲಿ ಜನತಾ ಬಜಾರುಗಳನ್ನು ತೆರೆಯುವ ಪ್ರಸ್ತಾವನೆಗಳು ಇದೆಯೆ ?

ಸಿ) ಇಲ್ಲದಿದ್ದರೆ ಸರ್ಕಾರವು ಗಾಂಧಿಬಜಾರ್, ಜೆ.ಪಿ. ನಗರ, ಬನಶಂಕರಿ ೨ನೇ ಹಂತ, ಮತ್ತು ಇತರೆ ಹೊಸ ಬಡಾವಣೆಗಳಲ್ಲಿ ಜನತಾ ಬಜಾರುಗಳನ್ನು ಪರಿಗಣಿಸುವುದೇ ?

ಡಾ॥ ಸಿ. ಆರ್. ರಾಜು (ಸಹಕಾರ ರಾಜ್ಯ ಮಂತ್ರಿಗಳು).—

ಎ) ನಗರದಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಜನತಾ ಬಜಾರುಗಳು ಕಾರ್ಯ ನಿರ್ವಹಿಸುತ್ತಿವೆ.

೧) ಕೆಂಪೇಗೌಡ ರಸ್ತೆ ೨) ಪ್ಯಾಲೆಸ್ ಆರ್ಚರ್ಡ್, ೩) ಜಯನಗರ ೪) ಶಾಸಕರ ಭವನ ; ೫) ನಂದಿದುರ್ಗ ಬಡಾವಣೆ ೬) ಸಂಜಯನಗರ.

ಬಿ) ಪ್ರಸ್ತಾವನೆ ಇದೆ.

ಸಿ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಪಂತರಪಾಳ್ಯ ಪಟ್ಟಣಗೆರೆ ಪಂಚಾಯಿತಿಯಿಂದ ಖಾತೆ ಬದಲಾವಣೆಯಲ್ಲಿ ನಿಯಮಗಳ ಉಲ್ಲಂಘನೆ

೧೩೦೭ ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ).—ಮಾನ್ಯ ಕಂದಾಯ ಮತ್ತು ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಬೆಂಗಳೂರು ದಕ್ಷಿಣ ತಾಲ್ಲೂಕಿನ ಪಂತರ ಪಾಳ್ಯ ಪಟ್ಟಣಗೆರೆ ಪಂಚಾಯ್ತಿಯ ವ್ಯಾಪ್ತಿಗೆ ಬರುವ ಜಮೀನುಗಳಲ್ಲಿ ಒಟ್ಟು ಎಷ್ಟು ಖಾತೆಗಳನ್ನು ದಿನಾಂಕ ೧–೧–೧೯೯೦ರಿಂದ ಇದುವರೆಗೆ ಮಾಡಲಾಗಿದೆ ?

ಆ) ಈ ಮೇಲಿನ ಪ್ರಕರಣಗಳ ಖಾತೆಯ ಬದಲಾವಣೆಯಲ್ಲಿ ಕಾನೂನು ಮತ್ತು ನಿಯಮಗಳನ್ನು ಅನುಸರಿಸಲಾಗಿದೆಯೇ ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಸಚಿವರು).—

ಅ) ೧-೧-೧೯೯೦ರಿಂದ ಇದುವರೆಗೆ (೨೫-೬-೧೯೯೦) ಪಟ್ಟಣಗರೆ ಪಂಚಾಯ್ತಿಯಲ್ಲಿನ ಪಂತರ ಪಾಳ್ಯ ಗ್ರಾಮದ ಕಂದಾಯ ಭೂಮಿಗೆ ಖಾತೆ ಮಾಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲೂ ಅಮಾನತ್ತಿನಲ್ಲಿರುವ ನೌಕರರ ಸಂಖ್ಯೆ

೧೩೧೮. ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಎ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿರುವ ನೌಕರರ ಪೈಕಿ ಕಳೆದ ಹಲವು ವರ್ಷಗಳಲ್ಲಿ ಅಮಾನತ್ತಿನಲ್ಲಿಟ್ಟಿರುವ ನೌಕರರ ಸಂಖ್ಯೆ (ಹೆಸರು, ಹುದ್ದೆ ಹಾಗೂ ದಿನಾಂಕಗಳನ್ನು ನೀಡುವುದು).

ಬಿ) ಅವರಲ್ಲಿ ಎಷ್ಟು ಜನ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಕ್ಕೆ ಸೇರಿದವರಿದ್ದಾರೆ ?

ಸಿ) ಅಮಾನತ್ತಿನಲ್ಲಿಟ್ಟಿರುವುದಕ್ಕೆ ಕಾರಣಗಳೇನು ? (ವಿವರಗಳನ್ನು ನೀಡುವುದು).

ಡಿ) ಅಮಾನತ್ತಿನಲ್ಲಿರುವ ನೌಕರರು ೬ ತಿಂಗಳಿಗಿಂತ ಹೆಚ್ಚಿನ ಅವಧಿ ಮೀರಿರುವರೇ ?

ಇ) ಹಾಗಿದ್ದಲ್ಲಿ, ಅವರ ಅಮಾನತ್ತನ್ನು ರದ್ದುಗೊಳಿಸಿ ಪುನಃ ಕೆಲಸಕ್ಕೆ ತೆಗೆದುಕೊಳ್ಳದೇ ಇರುವುದಕ್ಕೆ ಕಾರಣವೇನು ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಎ) ಹತ್ತು ಮಂದಿ ನೌಕರರು. (ಪಟ್ಟಿಯನ್ನು ಲಗತ್ತಿಸಲಾಗಿದೆ) (ಅನುಬಂಧ—೧)

ಬಿ) ಐದು ನೌಕರರು ಪರಿಶಿಷ್ಟ ಜಾತಿಗೆ ಸೇರಿದ್ದಾರೆ.

ಸಿ) ವಿವರಗಳನ್ನು ಅನುಬಂಧ—೨ರಲ್ಲಿ ನೀಡಲಾಗಿದೆ.

ಡಿ) ಆರು ಮಂದಿ ನೌಕರರು ೬ ತಿಂಗಳ ಅವಧಿ ಮೀರಿ ಅಮಾನತ್ತಿನಲ್ಲಿದ್ದಾರೆ.

ಇ) ನೀತಿಗೆಟ್ಟ ನಡವಳಿಕೆ, ಲಂಚಗುಳಿತನದಂತಹ ಗುರುತರವಾದ ಅಪಾದನೆಗಳನ್ನು ಸದರಿ ನೌಕರರು ಎದುರಿಸುತ್ತಿರುವುದರಿಂದ ಪುನಃ ಕೆಲಸಕ್ಕೆ ತೆಗೆದುಕೊಂಡಿಲ್ಲ.

"ANNEXURE—1"

LIST OF OFFICIALS SUSPENDED

Sl. No.	Name of the officials		Date of Suspension
	Sriyuths :		
1	G. K. Krishna Murthy, Suptd.	...	12-2-1990
2	K. J. Ninge Gowda, FDA.	...	12-2-1990
3	K. Nagabhushana, SDA.	...	12-2-1990
4	G. Muniyappa, SDA.	...	24-2-1990
5	Krishnappa, peon.	...	17-1-1989
6	B. Raju, SDA.	...	17-6-1989
7	R. Venkataramana, FDA.	...	17-9-1989
8	Kariyappa, Sweeper.	...	10-7-1986
9	Muniraju, Sweeper.	...	10-7-1986
10	C. Muniyappa, Peon.	...	10-7-1986